ಶ್ರೀ ಎ. ಜಿ. ಕೊಡಗಿ.—ಸ್ವಾಮಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಶೀಘ್ರಲಿಪಿಕಾರರ ಹಾಗೂ ಅಸಿಸ್ಟೆಂಟರ ದರ್ಜೆಗಳನ್ನು ಪ್ರತ್ಯೇಕವಾಗಿ ಮುಂದುವರಿಸಲಾಗಿದೆ ಎಂದು ಹೇಳಿದ್ದೀರಿ ಆದರೆ ಬಡ್ತಿ ವಿಚಾರದಲ್ಲಿ ಒಂದೊಕ್ಕೊಂದು ಹೊಂದಿಸಿಕೊಂಡು ಮಾಡಿದ್ದೀರಿ ಇದು ನಮಂಜಸವೇ ?

ಶ್ರೀ ಡಿ. ದೇವರಾಜ ಅರಸ್.—ಇವರ ವಿಚಾರದಲ್ಲಿ ಹಿಂದಿನಿಂದಲೂ ಪ್ರಮೋಷನ್ ಪ್ರಶ್ನೆ ಬಂದಾಗ ಒಂದಕ್ಕೊಂದು ಹೊಂದಿಸಿಕೊಂಡು ಮಾಡಬೇಕೆಂದು ರೂಲ್ಸಿನಲ್ಲಿದೆ.

ಶ್ರೀ ಎ. ಜಿ. ಕೊಡಗಿ.—ಸ್ಟೆನೋಗ್ರಾಫರ್ಸ್ ಕೇಡರ್ ಪ್ರತ್ಯೇಕವಾಗಿರುವಂಥಾದ್ದು. ಅವರಿಗೆ ಪ್ರಮೋಷನ್ ಕೊಟ್ಟು ಮಿನಿಸ್ಟೀರಿಯಲ್‌ಗೆ ತಗೆದುಕೊಂಡರೆ ಮಿನಿಸ್ಟೀರಿಯಲ್ ಕೇಡರ್‌ನವರಿಗೆ ಅವಕಾಶ ಕುಂಠಿತವಾಗುತ್ತದೆ. ಅವರಿಗೆ ಅವಕಾಶ ಕಡಿಮೆಯಾಗುತ್ತದೆ. ಈ ರೀತಿ ಸ್ಟೆನೋಗ್ರಾಫರುಗಳಿಗೆ ಪ್ರಮೋಷನ್ ಕೊಟ್ಟು ಮಿನಿಸ್ಟೀರಿಯಲ್ ಕೇಡರಿಗೆ ತೆಗೆದುಕೊಳ್ಳುವುದು ಎಸ್. ಆರ್. ಸಿ. ಅಕ್ಕೆಗೆ ವಿರೋಧವಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಈ ಬಗ್ಗೆ ನಾವು ಕಾನೂನು ನೋಡಿದ್ದೇವೆ. ಇದು ಕಾನೂನಿಗೆ ವಿರೋಧವಿಲ್ಲ ಎಂದು ತಿಳಿದುಬಂದಿದ್ದರಿಂದ ಆ ರೀತಿ ಮಾಡಿದ್ದೇವೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಯಾವರೀತಿ ಮಾಡಿದ್ದಾರೆಯೋ ಅದೇರೀತಿ ನಾವೂ ಮಾಡಿದ್ದೇವೆ. ಸ್ಟೆನೋಗ್ರಾಫರಿಗೆ ಪ್ರಮೋಷನ್ ಕೊಟ್ಟಾಗ ಅವರು ಮಿನಿಸ್ಟೀರಿಯಲ್‌ಗೆ ಸೇರಿಕೊಳ್ಳುತ್ತಾರೆ. ಆ ಮೇಲೆ ಅಂಡರ್‌ಸೆಕ್ರೆಟರಿಯಾಗಿ ಹೊರಟು ಹೋಗುತ್ತಾರೆ. ನಮ್ಮಲ್ಲಿ ಒಂದು ಅನುಭವದ ಮೇಲೆ ಅವರನ್ನು ಮಿನಿಸ್ಟೀರಿಯಲ್ ಕೇಡರಿಗೆ ಒಂದು ರೆವೆಲ್‌ನಲ್ಲಿ ಸೇರಿಸಿದೆ ಹೋದರೆ ಅವರಿಗೆ ಸೆಕ್ರೆಟೇರಿಯಟ್‌ನಲ್ಲಿ ಆಗಬೇಕಾದಂತಹ ಎಕ್ಸ್‌ಪೀರಿಯನ್ಸ್ ಮತ್ತು ಇತರ ಪ್ರೊಸೀಜರರ್ ಮ್ಯಾಟರ್ಸ್ ತಿಳಿಯುವುದಿಲ್ಲ. ಅವರು ನೇರವಾಗಿ ಪ್ರಮೋಷನ್ ಆಗಿ ಬಂದರೆ ಅವರು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಮಿನಿಸ್ಟೀರಿಯಲ್ ಕೇಡರ್‌ನಲ್ಲಿ ಸ್ವಲ್ಪ ದಿವಸ ಇದ್ದು ಪ್ರೊಸೀಜರರ್ ಮ್ಯಾಟರ್ಸ್ ತಿಳಿದುಕೊಂಡು ಹೈಯರ್ ರೆವೆನ್ಯೂಗೆ ಪ್ರಮೋಷನ್ ಆಗಿ ಹೋದರೆ ಅವರು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ನಾವು ಆ ರೀತಿ ಮಾಡಿದ್ದೇವೆ. ಅದು ಯಾವ ಕಾನೂನಿಗೂ ವಿರೋಧ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಚಿವಾಲಯದಲ್ಲಿರತಕ್ಕ ಬೆರಳಚ್ಚುಗಾರರು ಕೆಲವರು ಮಂತ್ರಿಗಳ ಮೇಲೆ ಪ್ರಭಾವಬೀರಿ ಕೆಲವರಿಗೆ ನೌಕರಿಯನ್ನು ಕೊಡಿಸುವುದರಲ್ಲಿ ತೊಡಗಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಈಗ ಮಾನ್ಯ ಸದಸ್ಯರು ಈ ವಿಷಯವನ್ನು ಹೇಳುತ್ತಿದ್ದಾರೆ. ಅದು ನಮ್ಮ ಗಮನಕ್ಕೆ ಬಂದರೆ ಅವರನ್ನು ಅಲ್ಲಿಂದ ಆಚೆಗೆ ಓಡಿಸುತ್ತೇವೆ.

AGITATION OF LANDLORDS AGAINST MYSORE LAND REFORMS (AMENDMENT) BILL, 1972.

307. Sri M. S. KRISHNAN (Malleswaram).—

Will the Minister for Revenue be pleased to state :—

(*a*) whether it has come to the notice of the Government that a considerable section of the richer landlords have been campaigning against the Mysore State Land Reforms (Amendment) Bill, 1972 ;

(*b*) whether the Government is aware that these landlords have threatened to create a lawless situation if and when the Billl is enacted and implemented ;

(*c*) whether Government is aware that influential Congressmen are associated with this agitation ;

(*d*) whether it is a fact that in view of this agitation by rich landlords, the Government is considering proposals to change the Amending Bill in favour of the landlords ?

Sri N. Hutchamasthy Gowda (Minister for Revenue).—

(*a*) to (*d*) "No".

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನನ್ನ ಪ್ರಶ್ನೆಗಳಿಗೆ ಕೊಟ್ಟಿರತಕ್ಕ ಉತ್ತರದಲ್ಲಿ ಪ್ರತಿಯೊಂದಕ್ಕೂ 'ಇಲ್ಲ' ಎಂದು ಹೇಳಿದ್ದೀರಿ, ಆದರೆ ನಿಮ್ಮ ಕಾಂಗ್ರೆಸ್ ಪಕ್ಷದವರೇ ಆದ ಶ್ರೀ ಎಚ್. ಕೆ. ವೀರಣ್ಣಗೌಡರು ಪ್ಯೂನಾರು ರಾಪ್ಯಾವ್ಯಾತ ಈಗಿನ ಭೂಸುಧಾರಣಾ ಮಸೂದೆಯು ಬಗ್ಗೆ ಪ್ರತಿಗಾಮಿಯ ರೀತಿ ತೆಗೆದುಕೊಂಡು ಹೋಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಅವರ ಬಗ್ಗೆ ಅವರು ದೊಡ್ಡ ಭೂಮಾಲೀಕರ ನಮ್ಮೇಳನವನ್ನು ರಾಸ್ಯವೆ ಎಲ್ಲಾ ಕಡೆಗಳಲ್ಲಿಯೂ ನಡೆಸುತ್ತಾ ಇರುವುದು ಪತ್ರಿಕೆಗಳಲ್ಲಿ ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ ಅಷ್ಟೇ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಪತ್ರಿಕೆಗಳಲ್ಲಿ ಬಂದಮೇಲೆ ಸರ್ಕಾರದ ಗಮನಕ್ಕೆ ಬಂದಂತೆ ಆಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ನಮ್ಮ ಗಮನಕ್ಕೆ ಬಂದಿದೆ ಎಂದರೆ ಅದು ಅಧಿಕಾರ ಯುತವಾಗಿ ನಮಗೆ ಬರವಣಿಗೆ ಅಪರಾ ನೇರವಾಗಿ ನಮ್ಮ ಹತ್ತಿರ ಬಂದು ಮನವಿ ಸಲ್ಲಿಕುವುದರ ಮುಖಾಂತರ ಬಂದರೆ ಅದು ನಮ್ಮ ಗಮನಕ್ಕೆ ಬಂದಿದೆಯೆಂದು ಅರ್ಥವಾಗುತ್ತದೆ. ಪತ್ರಿಕೆಗಳಲ್ಲಿ ಬಂದಿರುವುದಕ್ಕೆಲ್ಲಾ ನಾವು ಗಮನಕೊಟ್ಟುಕೊಂಡು ಹೋದರೆ ವ್ಯವಹಾರ ನಡೆಸುವುದಕ್ಕೆ ಕಷ್ಟವಾಗುತ್ತದೆ.

9-30 A.M.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ವೀರಣ್ಣಗೌಡರು ತಮ್ಮ ಪಕ್ಷದವರೇ ಆಗಿರುವುದರಿಂದ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಹೆಸರನ್ನು ಹೇಳುವುದು ಸರಿಯಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಹೇಳಿದ್ದು ಆಯಿತು. ಇನ್ನು ಮುಂದೆ ಹೇಳುವುದಿಲ್ಲ. ಅವರು ಇಂದು ಮಾಜೀ ಮಂತ್ರಿಗಳಾಗಿದ್ದಾರೆ. ಅವರು ಸರ್ಕಾರದವರು ಈಗ ತಂದಿರುವ ಭೂಸುಧಾರಣಾ ಮಸೂದೆಯನ್ನು ಬುಡಮೇಲು ಮಾಡಬೇಕೆಂದು ಪ್ರಯತ್ನ ನಡೆಸುತ್ತಿರುವುದರಿಂದ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಭೂಸುಧಾರಣಾ ವಿಚಾರದಲ್ಲಿ ಅಭಿಪ್ರಾಯಭೇದ ಎದುರು ಪಕ್ಷದಲ್ಲಿಯೂ ಇದೆ ಮತ್ತು ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಸಹ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಿನ ಭೂಸುಧಾರಣಾ ಕಾನೂನನ್ನು ಸರ್ಕಾರದವರು ಒಪ್ಪಿದ ಪಕ್ಷದಲ್ಲಿ ಬಲವಾದಂಥ ಕ್ರಾಂತಿಯನ್ನು ಎಬ್ಬಿಸುತ್ತೇವೆ ಎನ್ನುವ ಮಾದವನ್ನು ಒಂದು ಪಂಥದ ಜನರು ಮಂಡಿಸಿವಾರೆ. ಅಂತಹವರನ್ನು ಬಗ್ಗುಬಡಿಯುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರಮಾಧಿಕಾರ ಇರುವುದು ಈ ಸಭೆಗೆ ಮಾತ್ರ. ಈ ಸಭೆ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ಅದು ಜಾರಿಗೆ ಬರುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಭೂ ಸುಧಾರಣೆ ವಿಚಾರದಲ್ಲಿ ಪ್ರಗತಿಗಾಮಿ ಕಾನೂನನ್ನು ಜಾರಿಗೆ ತರುತ್ತೇವೆಂದು ತಾವು ಹೊರಟಿರುವಾಗ, ತಮ್ಮ ಪಕ್ಷದವರೇ ಕೆಲವರು ಪ್ರತಿಗಾಮಿ ಕಾನೂನನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಯಾವುದನ್ನು ಜಾರಿಗೆ ತರುತ್ತಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸಭೆಗೆ ಪರಮಾಧಿಕಾರವಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ಮಾನ್ಯ ಸಭೆ ಏನು ತೀರ್ಮಾನ ಮಾಡುತ್ತದೋ ಅದು ಜಾರಿಗೆ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಭೆಗೆ ಪರಮಾಧಿಕಾರ ಇರುವುದು ನಿಜ. ಆದರೆ ರಾಜಕೀಯ ಪಕ್ಷಗಳಲ್ಲಿ ಒಂದು ಶಿಸ್ತು ಇದೆ ಎಂದು ನಾನು ಭಾವಿಸಿದ್ದೇನೆ. ಈಗ ತಮ್ಮ ಪಕ್ಷದವರೇ ಈಗಿನ ಭೂ ಸುಧಾರಣಾ ಕಾನೂನನ್ನು ವಿರೋಧ ಮಾಡುತ್ತಿರುವುದರಿಂದ, ಅಂತಹವರ ಮೇಲೆ ಏನು ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜಕೀಯ ಪಕ್ಷದಲ್ಲಿರುವವರು ತಮ್ಮ ಪಕ್ಷದ ತತ್ವಕ್ಕೆ ಒಳಪಟ್ಟು ನಡೆದುಕೊಳ್ಳದಿದ್ದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆನ್ನುವ ಸ್ವಾಭಾವಿಕ ಪದ್ಧತಿಯಿದೆ.

ಶ್ರೀ ಎಚ್. ಎಸ. ಸಿದ್ದಪ್ಪ.—ಈಗಿನ ಭೂ ಸುಧಾರಣಾ ಕಾನೂನಿನ ವಿಚಾರದಲ್ಲಿ ಭಿನ್ನಾಭಿಪ್ರಾಯ ಆ ಪಕ್ಷದಲ್ಲಲ್ಲಿಯೂ ಇದೆ, ಈ ಪಕ್ಷದಲ್ಲಿಯೂ ಇದೆ ಎಂದು ತಾವು ಹೇಳಿದಿರಿ. ತಮ್ಮ ಪಕ್ಷದಲ್ಲಿ ಆ ಭಿನ್ನಾಭಿಪ್ರಾಯ ಯಾವ ಮಟ್ಟದಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಅಳತೆ ಮಾಡಿ ಹೇಳುವುದಕ್ಕೆ ಈಗ ಸಮಯವಿಲ್ಲ. ಭಿನ್ನಾಭಿಪ್ರಾಯ ನಮ್ಮ ಪಕ್ಷದಲ್ಲಿ ಯಾವ ಮಟ್ಟದಲ್ಲಿದೆ ಎಂಬುದನ್ನು ನಮ್ಮ ಪಕ್ಷದ ಸಭೆಯಲ್ಲಿ ಅಳತೆ ಮಾಡಿ ನೋಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಭಿನ್ನಾಭಿಪ್ರಾಯ ಇರುವುದು ಸಹಜ ಎಂಬುದನ್ನು ಒಪ್ಪಿಕೊಂಡರೂ ಸಹ ಭಾರಿ ಜಮೀನುದಾರರು ಸೇರಿಕೊಂಡು ಈಗಿನ ಸೀಲಿಂಗ್ ಮಿತಿಯನ್ನು ಜಾರಿಗೆ ತರುವುದಕ್ಕೆ ಅವಕಾಶ ಕೊಡದೆ ರೈತ ವರ್ಗಕ್ಕೆ ಪರಿಹಾರ ಸಿಕ್ಕದ ಹಾಗೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ತೊಡೆದುಹಾಕುವುದಕ್ಕೆ ಈ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆ ಮುಗಿಯುವುದರೊಳಗೆ ಪಾಸ್ ಮಾಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಭೂ ಸುಧಾರಣಾ ಮಸೂದೆಯನ್ನು ಸಭೆಯು ಮುಂದೆ ಮಂಡಿಸಲಾಗಿದೆ. ಅದರ ಮೇಲೆ ಈಗಾಗಲೇ ಇಬ್ಬರು ಮೂವರು ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ಅಧಿವೇಶನದಲ್ಲಿಯೇ ಅದು ಬರುತ್ತದೆ ಮತ್ತು ಅದರ ಬಗ್ಗೆ ಮಾನ್ಯ ಸಭೆ ತೀರ್ಮಾನ ಮಾಡಿದ ಮೇಲೆ ಅದು ಜಾರಿಗೆ ಬರುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಕಾಂಗ್ರೆಸ್ ಪಕ್ಷದವರು ತಮ್ಮ ಚುನಾವಣಾ ಪ್ರಚಾರದ ಮ್ಯಾನಿಫೆಸ್ಟೋದಲ್ಲಿ ಸೇರಿಸಿದಂತಹ ಒಂದು ನೀತಿಯಾಗಿರಲಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿಯೇ ಭೂಸುಧಾರಣಾ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ಪತ್ರಿಕೋದ್ಯಮಿಗಳು ಮುಖ್ಯಮಂತ್ರಿಗಳ ಗಮನವನ್ನು ಸೆಳೆದಾಗ, ಆ ರೀತಿ ಎಲ್ಲರೂ ಬದಲಾವಣೆ ಮಾಡಬೇಕೆನ್ನುವ ಅಭಿಪ್ರಾಯ ಪಟ್ಟರೆ, ತಿದ್ದುಪಡಿ ಮಾಡುವುದಕ್ಕೆ ತಯಾರಾಗಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿರುವುದರಿಂದ, ಈ ಭೂಸುಧಾರಣಾ ಮಸೂದೆಯನ್ನು ಪ್ರತಿಗಾಮಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ತಯಾರಾಗಿದ್ದಾರೆಂಬುದು ನಿಜವಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಾನ್ಯ ಸಭೆಯು ಅಂತ್ಯ ತೀರ್ಮಾನ ತೆಗೆದು ಕೊಂಡಾಗ, ಬೇರೆಯವರು ಕೊಟ್ಟ ಯಾವ ಹೇಳಿಕೆಗಳೂ ಜಾರಿಗೆ ಬಂದಂತಾಗುವುದಿಲ್ಲ. ಈ ಮಾನ್ಯ ಸಭೆಯ ತೀರ್ಮಾನವೇ ಅಂತ್ಯ ತೀರ್ಮಾನವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿರುವುದು ಸ್ಪಷ್ಟವಾಗಿದೆ. ಭೂ ಮಾಲೀಕರು ಒತ್ತಡ ಮಾಡಿದರೆ ಅದಕ್ಕೋಸ್ಕರ ತಿದ್ದುಪಡಿ ಮಾಡೋಣ ಎಂದು ನಾನು ಹೇಳಿಲ್ಲ. ನಾನು ಹೇಳಿರತಕ್ಕಂಥದ್ದು ಪಕ್ಷ ಈ ಸಭೆಯಲ್ಲಿ ಕುಳಿತಾಗ ಯಾವ ತೀರ್ಮಾನವಾಗುತ್ತದೋ ಅದು ಜಾರಿಗೆ ಬರುತ್ತದೆ ಎಂದು.

COLLEGE OF ARTS, SCIENCE OR COMMERCE IN CIVIL AREA OF BANGALORE.

319. Sri K. R. SRINIVASALU NAYUDU (Shanthinagar).—

Will the Minister for Education be pleased to state :—

(*a*) whether it has cime to the notice of Government that there is no First Grade College either of Arts or Science or Commerce in the Civil Area of Bangalore ; if so, the reason for the same ;